**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರ್ಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 166/2018**

**ಚಾ.ಸಾ – 1**

**ಪ್ರಾ.ಸಾ– 3**

**ಸಾಕ್ಷಿಗೆ ದಿನಾಂಕ 17–05–2024 ರಂದು ಪ್ರಮಾಣ ವಚನ ಬೋಧಿಸಲಾಯಿತು**

ಸಾಕ್ಷಿಯ ಹೆಸರು ಃ ದೌಲತರಾಯ ಪಾಟೀಲ

ತಂದೆಯ ಹೆಸರು ಃ ಭಗವಂತ್ರಾಯ

ವಯಸ್ಸು ಃ 59 ವರ್ಷ

ಉದ್ಯೋಗ ಃ ಸಹಾಯಕ ನಿರ್ದೇಶಕರು, ಆಹಾರ ಇಲಾಖೆ ಕಲ್ಬುರ್ಗಿ

ವಾಸಸ್ಥಳ ಃ ಕಲ್ಬುರ್ಗಿ

**ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ**

ನಾನು 1995 ರಿಂದ 2019 ರವರೆಗೆ ನಾನು ಜೇವರ್ಗಿಯ ತಹಸಿಲ್ದಾರ ಕಚೇರಿಯಲ್ಲಿ ಆಹಾರ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕ 10–12–2014 ರಂದು ಬೆಳಿಗ್ಗೆ 4.00 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ನನಗೆ ದೂರವಾಣಿ ಮೂಲಕ ಮಾಹಿತಿ ಬಂದಿದ್ದು ಮಾಹಿತಿ ಸಾರಾಂಶದ ಮೇರೆಗೆ ಅಶೋಕ ಲೆ–ಲ್ಯಾಂಡ್ ಲಾರಿಯಲ್ಲಿ ಅಕ್ಕಿಯನ್ನು ಸಾಗಾಟ ಮಾಡುತ್ತಿದ್ದಾರೆ ಅಂತಾ ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿ ವಿಚಾರವನ್ನು ನಮ್ಮ ಸಿಬ್ಬಂದಿ ನಜೀರರವರಿಗೆ ತಿಳಿಸಿ ಅವರಿಗೆ ಪೊಲೀಸ್ ಠಾಣೆಗೆ ಬರುವುದಕ್ಕೆ ತಿಳಿಸಿದ್ದು ಹಾಗೂ ಸದರಿ ವಿಚಾರವನ್ನು ನಮ್ಮ ಮೇಲಾಧಿಕಾರಿಗಳಿಗೆ ದೂರವಾಣಿ ಮೂಲಕ ತಿಳಿಸಿರುತ್ತೇನೆ. ನಾವಿಬ್ಬರು ವೃತ್ತ ನಿರೀಕ್ಷಕರಾದ SS ಹುಲ್ಲೂರರವರಿಗೆ ಮಾಹಿತಿ ವಿಚಾರವನ್ನು ತಿಳಿಸಿ ಅವರೊಡನೆ ಜೇವರ್ಗಿಯ ರದ್ದೆವಾಡಗಿ ಕ್ರಾಸಿಗೆ ನಾನು, CPI, ಮಲ್ಲಿಕಾರ್ಜುನ, ಶರಣಪ್ಪ ಹಾಗೂ ಇತರೆ ಸಿಬ್ಬಂದಿ ಸೇರಿ ಸ್ಥಳಕ್ಕೆ ಪೊಲೀಸ್ ವಾಹನದಲ್ಲಿ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ಸಮಯ ಬೆಳಿಗ್ಗೆ 04–30 ಆಗಿತ್ತು. ನಾವು ಅಲ್ಲಿ ಲಾರಿ ವಾಹನಗಳನ್ನು ತಡೆದು ಪರಿಶೀಲನೆ ಮಾಡುತ್ತಿದ್ದು ಆಗ ಒಂದು ಅಶೋಕ ಲೇ–ಲ್ಯಾಂಡ್ ಲಾರಿ ಬಂದಿದ್ದು ಸದರಿ ಲಾರಿಯನ್ನು ತಡೆದು

ಸದರಿ ಲಾರಿಯ ಚಾಲಕನಿಗೆ ಆತ ಸಾಗಾಟ ಮಾಡುತ್ತಿದ್ದ ಸರಕಿಗೆ ಸಂಬಂಧಿಸಿದ ದಾಖಲಾತಿ ತೋರಿಸುವಂತೆ ಸೂಚಿಸಿದಾಗ ಆತ ತನ್ನ ಬಳಿ ಯಾವುದೇ ದಾಖಲಾತಿ ಇಲ್ಲ ಎಂದು ತಿಳಿಸಿರುತ್ತಾನೆ. ಸದರಿ ಲಾರಿಯನ್ನು ಪರಿಶೀಲಿಸಲಾಗಿ ಅದರಲ್ಲಿ ತಲಾ 50 k.g. ಯ 295 ಪಡಿತರ ಅಕ್ಕಿ ಚೀಲಗಳಿದ್ದವು. ಆ ನಂತರ ಅಕ್ಕಿ ಮತ್ತು ಲಾರಿಯನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿರುತ್ತೇವೆ. ಸದರಿ ಅಕ್ಕಿ ಪಡಿತರ ಹಾಗೂ ಇತರೆ ಇಲಾಖೆಯಲ್ಲಿ ನೀಡಲಾಗುವ ಪಡಿತರ ಅಕ್ಕಿಯಾಗಿದ್ದು ಸದರಿ ಅಕ್ಕಿಯನ್ನು ಕಡಿಮೆ ಬೆಲೆಗೆ ಖರಿದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಮಹಾರಾಷ್ಟ್ರಕ್ಕೆ ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿರುತ್ತಾನೆ. ಸದರಿ ಲಾರಿ ವಾಹನ ನಂ.ಎಪಿ-23 ವೈ-2259 ಆಗಿತ್ತು. ಸದರಿ ಅಕ್ಕಿಯ ಅಂದಾಜು ಮೌಲ್ಯ ರೂ.147500/- ಆಗುತ್ತಿತ್ತು. ಸದರಿ ವಾಹನ ಮತ್ತು ಅಕ್ಕಿಯನ್ನು ಪೊಲೀಸರ ವಶಕ್ಕೆ ನೀಡಿರುತ್ತೇವೆ. ಈಗ ಬಗ್ಗೆ ದೂರು ನೀಡಿರುತ್ತೇನೆ. ಸದರಿ ಲಾರಿ ಚಾಲಕನ ಹೆಸರು ಮಹ್ಮದ ಸಾದಿಕ್ ಜಹಿರಾಬಾದಿ ಆಗಿತ್ತು.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ದೂರಾಗಿದ್ದು ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ದೂರನ್ನು ನಿಪಿ-6 ಎಂದು ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-2 ರಿಂದ 5ರ ಛಾಯಾಚಿತ್ರಗಳನ್ನು ತೋರಿಸಲಾಗಿ ಅದರಲ್ಲಿರುವ ಲಾರಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಲಾರಿ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎಸ್.ಎಂ. ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಆರೋಪಿ ಪರ ವಕೀಲರ ಕೋರಿಕೆಯನ್ನು ತಳ್ಳಿಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂಡಾಧಿಕಾರಿಗಳು, ಜೇವರಗಿ

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರ್ಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 166/2018**

**ಚಾ.ಸಾ – 4**

**ಫ್ರಾ.ಸಾ – 4**

**ಸಾಕ್ಷಿಗೆ ದಿನಾಂಕ 17–05–2024 ರಂದು ಪ್ರಮಾಣ ವಚನ ಬೋಧಿಸಲಾಯಿತು**

ಸಾಕ್ಷಿಯ ಹೆಸರು ಃ ನಜೀರ ಅಹ್ಮದ

ತಂದೆಯ ಹೆಸರು ಃ ಅಬ್ದುಲ್ ಗನಿ

ವಯಸ್ಸು ಃ 46 ವರ್ಷ

ಉದ್ಯೋಗ ಃ ಶಿರಸ್ತೆದಾರ, ತಹಸಿಲ್ದಾರ ಕಚೇರಿ ಜೇವರ್ಗಿ

ವಾಸಸ್ಥಳ ಃ ಕಲ್ಬುರ್ಗಿ

**<u>ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ</u>**

ನಾನು 2014 ರಿಂದ ನಾನು ಜೇವರ್ಗಿಯ ತಹಸಿಲ್ದಾರ ಕಚೇರಿಯಲ್ಲಿ ಆಹಾರ ನಿರೀಕ್ಷಕ ಹಾಗೂ ಶಿರಸ್ತೆದಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 10–12–2014 ರಂದು ಬೆಳಿಗ್ಗೆ 4.00 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ನನಗೆ ಚಾಸಾ–1 ಡಿ.ಬಿ.ಪಾಟೀಲರವರು ದೂರವಾಣಿ ಮೂಲಕ ಕರೆ ಮಾಡಿ ಅಕ್ಕಿ ಕಳ್ಳಸಾಗಾಣಿಕೆ ಮಾಡುತ್ತಿದ್ದಾರೆ ಅಂತಾ ತಿಳಿಸಿರುತ್ತಾರೆ. ಆ ನಂತರ ನಾನು ಮತ್ತು ಚಾಸಾ–1ರವರು ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ಆ ನಂತರ ನಾವು ಮತ್ತು ಪೊಲೀಸರು ರದ್ದೆವಾಡಗಿ ಕ್ರಾಸಿಗೆ ಹೋಗಿರುತ್ತೇವೆ. ಸ್ಥಳದಲ್ಲಿ ನಾವು ಲಾರಿ ವಾಹನಗಳನ್ನು ತಡೆದು ಪರಿಶೀಲಿಸುತ್ತಿದ್ದು ಆಗ ಎಪಿ–2259 ಲಾರಿ ಬಂದಿದ್ದು ಅದನ್ನು ಪರಿಶೀಲಿಸಲಾಗಿ ಅದರಲ್ಲಿ ಅಕ್ಕಿ ಚೀಲಗಳು ಇದ್ದು ಅದರಲ್ಲಿ ಸುಮಾರು 295 ಚೀಲಗಳಿದ್ದು ಪ್ರತಿ ಚೀಲದಲ್ಲಿ 100 ಕೆ.ಜಿ. ಅಕ್ಕಿ ಇತ್ತು. ಸದರಿ ಅಕ್ಕಿ ಸರಕಾರಕ್ಕೆ ಸೇರಿದ ಅಕ್ಕಿ ಆಗಿತ್ತು. ಸದರಿ ಅಕ್ಕಿ ಮತ್ತು ಲಾರಿಯನ್ನು ಸರಕಾರದ ವಶಕ್ಕೆ ನೀಡಿರುತ್ತೇವೆ. ಸದರಿ ಲಾರಿ ಚಾಲಕನ ಹೆಸರು ಕೇಳಲಾಗಿ ಆತ ತನ್ನ ಹೆಸರು ಸಾಧಿಕ್ ಎಂದು ತಿಳಿಸಿರುತ್ತಾನೆ. ಆತನನ್ನು ಅಕ್ಕಿಯ ಬಗ್ಗೆ ವಿಚಾರಿಸಲಾಗಿ ಆತ ಸರಕಾರದ ಅಕ್ಕಿ ಎಂದು ತಿಳಿಸಿರುತ್ತಾನೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ನಿಪಿ–2 ರಿಂದ 5ರ ಛಾಯಾಚಿತ್ರಗಳನ್ನು ತೋರಿಸಲಾಗಿ ಅದರಲ್ಲಿರುವ ಲಾರಿಯನ್ನು

ನೋಡಿ ಗುರುತಿಸಿರುತ್ತಾರೆ. ಸದರಿ ಲಾರಿ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ**

ಸದರಿ ಲಾರಿ ನೊಂದಣಿ ನಂ.ಎಪಿ–23 ವೈ–2259 ಆಗಿತ್ತು ಎಂದರೆ ನಿಜ. ಲಾರಿ ಚಾಲಕನನ್ನು ದಾಖಲಾತಿಗಳನ್ನು ಕೇಳಲಾಗಿ ಆತ ತನ್ನ ಬಳಿ ಯಾವುದೇ ದಾಖಲಾತಿಗಳು ಇಲ್ಲ ಎಂದು ಹೇಳಿರುತ್ತಾನೆ ಎಂದರೆ ನಿಜ. ಸದರಿ ಅಕ್ಕಿ ಪಡಿತರ ಅಕ್ಕಿಯಾಗಿತ್ತು ಎಂದರೆ ನಿಜ. ಸದರಿ ಚೀಲದಲ್ಲಿ ತಲಾ 50 ಕೆ.ಜಿ. ಅಕ್ಕಿ ಇತ್ತು ಎಂದರೆ ನಿಜ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎಸ್.ಎಂ. ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಆರೋಪಿ ಪರ ವಕೀಲರ ಕೋರಿಕೆಯನ್ನು ತಳ್ಳಿಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂಡಾಧಿಕಾರಿಗಳು, ಜೇವರಗಿ